ಮುಂದೂಡಬೇಕೆಂದು ವಿರೋಧ ಪಕ್ಷದ ನಾಯಕರ ಇಚ್ಛೆಯಾದರೆ, ತಾವು ಅದನ್ನು ಮೋಷನ್ ಮುಖಾಂತರ ತರಬೇಕಾಗುತ್ತದೆ. ಸದನ ಅದಕ್ಕೆ ತನ್ನ ಅನುಮತಿಯನ್ನು ಕೊಡಬೇಕಾಗುತ್ತದೆ. ಇಲ್ಲದೇ ಹೋದರೆ ಅದಕ್ಕೆ ಕೊಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಈಗ ಆಯಿತು. ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಸಭಾಧ್ಯಕ್ಷರೇ, ತಾವು ರೂಲಿಂಗನ್ನು ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ಅವರು ರೂಲ್‌ನ್ನು ಕೋಟ್ ಮಾಡಿದರು. 38ನೇ ನಿಯಮವನ್ನು ಅವರು ಓದಿದರು. ಅದರಲ್ಲಿ ತಮಗೆ ಅಧಿಕಾರ ಇದೆ. ನಾನು ರೂಲ್ ಕಡೆ ಹೋಗುತ್ತಿಲ್ಲ, ತಮಗೆ ಅಧಿಕಾರ ಇದೆ. ವೇಳೆ ಆಗಿದೆ. ಮಹತ್ವವಾದ ಪ್ರಶ್ನೆಗಳು ಇವೆ. ಈಗ ನಿನ್ನೆಯಿಂದ ತಾವು ಯಾವ ರೀತಿ ಹೇಳಿದ್ದೀರಿ, ಆ ರೀತಿ ನಾವು ನಡೆದುಕೊಂಡು ಹೋಗಿದ್ದೇವೆ. ಅದರಲ್ಲೂ ತಾವು ನೋಕಾನ್ ಫಿಡೆನ್ಸ್ ಅನ್ನು ಯಾವಾಗ ತೆಗೆದುಕೊಳ್ಳಬೇಕು ಎನ್ನುವುದನ್ನು ಕೂಡ ತಾವು ನೋಡಿದ್ದೀರಿ. ಈ ಮಹತ್ವದ ವಿಚಾರ ಇರುವಾಗ ಈಗ ವಿಷಯ ಬಹಳ ಮಹತ್ತರವಾಗಿರುವುದರಿಂದ ಮತ್ತು ಕಾನೂನಿನಲ್ಲಿ ಅವಕಾಶ ಇರುವುದರಿಂದ, ಇಲ್ಲದೇ ಇದ್ದರೆ ನಾನು ಕೇಳುತ್ತಿರಲಿಲ್ಲ, ರೂಲ್ 38ರಲ್ಲಿ ಅಧ್ಯಕ್ಷರು ಅನ್ಯಥಾ ನಿರ್ಧರಿಸದ ಹೊರತು ಎಂದು ಇದೆ, ಇದನ್ನು ತಾವು ಉಪಯೋಗಿಸಿಕೊಂಡು ದಯವಿಟ್ಟು ಕ್ವೆಶ್ಚನ್ ಅವರ್ ಅನ್ನು ಮನ್ನಾ ಮಾಡಬೇಕು.

ಶ್ರೀ ಸಿ.ಎಸ್. ಪುಟ್ಟೇಗೌಡ : ನನ್ನದು ಪಾಯಿಂಟ್ ಆಫ್ ಅರ್ಡರ್

ಅಧ್ಯಕ್ಷರು : ಈಗ ಪ್ರಶ್ನೋತ್ತರ ಮಾನ್ಯ ಸದಸ್ಯರಾದ ಶ್ರೀ ಟಿ.ಬಿ. ಜಯಚಂದ್ರ ಅವರು ಪ್ರಶ್ನೆ ಕೇಳಬೇಕು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಹೇಮಾವತಿ ಯೋಜನೆ ಕುರಿತು

428 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಹೇಮಾವತಿ ಯೋಜನೆಯನ್ನು ರೂಪಿಸಿದಾಗ ಎಷ್ಟು ಎಕರೆಗಳಿಗೆ ನೀರುಣಿಸುವ ಯೋಜನೆಯನ್ನು ಸರ್ಕಾರದವರು ಅಂದಾಜು ಮಾಡಿ ಹಾಗೂ ಅದರಲ್ಲಿ ಅರೆ ನೀರಾವರಿ ಎಷ್ಟು ನೀರಾವರಿ ಎಷ್ಟು?*

ಆ) *ಇಲ್ಲಿಯವರೆಗೆ ಎಷ್ಟು ಎಕರೆಗೆ ನೀರು ಉಣಿಸಲಾಗುತ್ತಿದೆ ನೀರಾವರಿ ಎಷ್ಟು ಅರೆ ನೀರಾವರಿ ಎಷ್ಟು?*

ಇ) *ಮೊದಲ ಅಂದಾಜಿನಂತೆ ಇನ್ನು ಎಷ್ಟು ಎಕರೆಗೆ ನೀರು ಕೊಡುವುದು ಬಾಕಿ ಇದೆ ಹಾಗೂ ಈ ಯೋಜನೆ ಪೂರ್ಣಗೊಳಿಸಲು ಇನ್ನು ಎಷ್ಟು ಅವಧಿ ಬೇಕಾಗುವುದು.*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 6,55,000 ಎಕರೆ ಪ್ರದೇಶವನ್ನು ಆರೆ ನೀರಾವರಿಯಿಂದಲೂ ಹಾಗೂ 45.756 ಎಕರೆ ಪ್ರದೇಶವನ್ನು ಏತ ನೀರಾವರಿಯಿಂದಲೂ ನೀರುಣಿಸಲು ಯೋಜಿಸಲಾಗಿದೆ. (ಒಟ್ಟು 7,00,756 ಎಕರೆ ಪ್ರದೇಶ)

ಆರೆ ನೀರಾವರಿ : 6,87,756 ಎಕರೆ

ನೀರಾವರಿ : 13,000 ಎಕರೆ

ಆ) ಇಲ್ಲಿಯವರೆಗೆ 1,54,830 ಎಕರೆ ಪ್ರದೇಶಕ್ಕೆ ನೀರು ಉಣಿಸಲಾಗಿದೆ.

ಆರೆ ನೀರಾವರಿ : 1,41,830 ಎಕರೆ

ನೀರಾವರಿ : 13,000 ಎಕರೆ

ಇ) 5,45,926 ಎಕರೆ ಪ್ರದೇಶಕ್ಕೆ ಇನ್ನೂ ನೀರನ್ನು ಕೊಡಬೇಕಾಗಿರುತ್ತದೆ. ಈ ಯೋಜನೆಯನ್ನು 1999-2000 ಇಸವಿ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ಸಭಾಧ್ಯಕ್ಷರೆ, ನನ್ನ ಪ್ರಶ್ನೆ ಏನೆಂದರೆ ಹೇಮಾವತಿ ಯೋಜನೆಯನ್ನು ರೂಪಿಸಿದ ಸಂದರ್ಭದಲ್ಲಿ ಎಷ್ಟು ಎಕರೆಗೆ ನೀರನ್ನು ಹಾಯಿಸುವುದಕ್ಕೆ ಸಾಧ್ಯ ಇತ್ತು? ಅದರಲ್ಲಿ ನೀರಾವರಿ ಎಷ್ಟು? ಆರೆ ನೀರಾವರಿ ಎಷ್ಟು? ಏತ ನೀರಾವರಿ ಎಷ್ಟು? ಎಂಬ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ನಾನು ಒಂದು ಉಪ ಪ್ರಶ್ನೆಯನ್ನು ನೇರವಾಗಿ ಕೇಳುವುದಕ್ಕೆ ಇಷ್ಟ ಪಡುತ್ತೇನೆ. ಈಗ ತಾವು ತಮ್ಮ ಉತ್ತರದಲ್ಲಿ ಕೊಟ್ಟಿರತಕ್ಕ ರೀತಿ, ನೀರಾವರಿ ಯೋಜನೆಗೆ ಏನು 13 ಸಾವಿರ ಎಕರೆಗೂ ಹೆಚ್ಚು ಪ್ರದೇಶ ಮೀರಿಲ್ಲದೆ ಎನ್ನತಕ್ಕದ್ದು ಒಂದು ಪ್ರಶ್ನೆ. ಬಹಳ ಪ್ರಾಮುಖ್ಯವಾಗಿ ಎನ್ನುವುದು ಸರ್ಕಾರದ ಸಂಕಲ್ಪ. ಯೋಜನೆಯಲ್ಲಿ ಅಳವಡಿಸಿರತಕ್ಕದ್ದು, ಯೋಜನೆಯಲ್ಲಿ ಸೇರಿರತಕ್ಕದ್ದು ಸೇರಿ ಎಷ್ಟು ಏತ ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದೀರಿ? ಯಾವ್ಯಾವ ಏತ ನೀರಾವರಿಯಲ್ಲಿ ಎಷ್ಟು ಎಕರೆ ನೀರಾವರಿ ಆಗುತ್ತದೆ? ಮತ್ತು ಇಲ್ಲಿಯವರೆಗೆ ಖರ್ಚಾಗಿರತಕ್ಕ ಹಣ ಎಷ್ಟು? ಅಂದರೆ ನಿಮ್ಮ ನಿಯಮವನ್ನು ಮೀರಿ, 45 ಸಾವಿರಕ್ಕೂ ಹೆಚ್ಚು ಇವತ್ತು ಏತ ನೀರಾವರಿಗಳನ್ನು ನೀವು ಪ್ರಾರಂಭ ಮಾಡಿಲ್ಲವೇ? ಅದಕ್ಕಾಗಿ ನೀವು ನೀರಾವರಿಗೆ ಹೆಚ್ಚಿನ ಪ್ರದೇಶವನ್ನು ಸ್ಪಷ್ಟ ಮಾಡಿದ ಹಾಗೆ ಆಗಲಿಲ್ಲವೇ, ಎನ್ನುವುದಕ್ಕೆ ತಮ್ಮ ಸ್ಪಷ್ಟ ಉತ್ತರ ಹೇಳಿ.

ಶ್ರೀ ಹೆಚ್.ಡಿ. ದೇವೇಗೌಡ : ಮೂಲ ಯೋಜನೆಯಲ್ಲಿ ಏತ ನೀರಾವರಿ ಯೋಜನೆ ಇಲ್ಲ. ಏನು ಯೋಜನೆ ಪ್ರಾರಂಭ ಆಯಿತು, ಆಗ ಈ ಯೋಜನೆ ಮಂಜೂರು ಆಗಿದ್ದು ಕೇವಲ 16 ಕೋಟಿ ರೂಪಾಯಿಗಳಿಗೆ. ಇದರಲ್ಲಿ ಯಾವ ಏತ ನೀರಾವರಿ ಯೋಜನೆಗಳೂ ಇಲ್ಲ. ಅಲ್ಲಿಂದ ಈಚೆಗೆ, ಈ ಯೋಜನೆ ಬಗ್ಗೆ ಪುನರ್ ವಿಮರ್ಶಿತ ಅಂದಾಜನ್ನು ನಾವು ಮಾಡಿದಾಗ ಕೆಲವು ಯೋಜನೆಗಳನ್ನು ನಾವು ರಿವೈಸ್ ಎಸ್ಟಿಮೇಟ್‌ನಲ್ಲಿ ಸೇರಿಸಿದ್ದೇವೆ. ಆದರೆ ಆಗ ಆ ಕೆಲಸ ಪ್ರಾರಂಭ ಆಗಿದ್ದುದು ಇಲ್ಲ. ಅಲ್ಲಿಂದ ಈಚೆಗೆ ಕೆಲವು ಯೋಜನೆಗಳಿಗೆ ಮಂಜೂರಾತಿ ಕೊಟ್ಟು ಕೆಲಸ ಮಾಡುತ್ತಿದ್ದಾರೆ. ಪ್ರತಿ ಒಂದು ಯೋಜನೆಯ ವಿವರವನ್ನು ಬೇಕಾದರೆ ನಿಮಗೆ ಕಳಿಸಿಕೊಡುತ್ತೇನೆ. ಏಕೆಂದು ಹೇಳಿದರೆ ಕೆಲವು ಕೆಲಸಗಳು ನಡೆಯುತ್ತಿವೆ, ಕೆಲವು ಕೆಲಸ ನಡೆಯುತ್ತಿಲ್ಲ. ಆಡಳಿತ ಮಂಜೂರಾತಿ ತಾಂತ್ರಿಕ ಮಂಜೂರಾತಿ ಕೊಟ್ಟಿದ್ದಾರೆ. ಅದು ದೊಡ್ಡ ಲಿಸ್ಟ್ ಇರುವುದರಿಂದ ಪೂರ್ಣ ಲಿಸ್ಟನ್ನು ನಿಮಗೆ ಕಳಿಸಿ ಕೊಡುತ್ತೇನೆ. ಒಂದು ಮಾತ್ರ ಈಗ ದಯಮಾಡಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇದರ ಬಗ್ಗೆ ಇವತ್ತು ಗೊಂದಲ ಇದೆ. ಈ ವಿಷಯದ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮೂಲ ಯೋಜನೆಯಲ್ಲಿ ಫ್ಲೋ ಇರಿಗೇಷನ್ ಏನು ಇದೆಯೋ ಅದಕ್ಕೆ ಅಡ್ಡಿ ಮಾಡಿ ಏತ ನೀರಾವರಿ ಯೋಜನೆ ಮಾಡತಕ್ಕದ್ದು ಈ ಸರ್ಕಾರದ

ಉದ್ದೇಶ ಇಲ್ಲ. ಆದರೆ ಒಂದು ಮಾತನ್ನು ನಾನು ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ಟನಲ್‌ಗಳು ಏನು ಹೇಗಿದೆಯೋ ಬಾಗೂರು ಟನಲ್ ಮತ್ತು ಅರಕಲಗೂಡಿನಲ್ಲಿ ಏನು ಒಂದು ಟನಲ್ ಇದೆ, ಆ ಟನಲ್ ಹೋಗಿರುವುದರಿಂದ, ಆ ಟನಲ್, ಸುರಂಗ ಒಡೆದು ಹೋದ ಕಾರಣ ನೀರು ಎಲ್ಲಾ ಸೀಪೇಜ್ ಬಂದು, ಅಲ್ಲಿ ಎಲ್ಲಾ ಬೆಳೆಗಳು ನಷ್ಟ ಆಗಿದೆ. ಮೇಲು ಭಾಗದಲ್ಲಿರತಕ್ಕ ಭೂಮಿಯಲ್ಲಿ ಎಲ್ಲಾ ಬೆಳೆಗಳು ಇವತ್ತು ನಷ್ಟ ಆಗುತ್ತಾ ಇರುವುದರಿಂದ ಆ ಯೋಜನೆಗಳನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಏಕೆಂದರೆ ಆ ರೈತರು ತುಂಬಾ ಕಷ್ಟಕ್ಕೆ ಈಡಾಗಿದ್ದಾರೆ. ಸುರಂಗದ ಹೊರಗಡೆ ಬಾಗೂರು ಮತ್ತು ನವಿಲೆ ಹತ್ತಿರ ಅರಕಲ ಗೂಡು ಟನಲ್‌ಗೆ ಸಂಬಂಧಪಟ್ಟಂತೆ ನಾವು ಏನು ಲಿಫ್ಟ್ ಇರಿಗೇಷನ್‌ಗೆ ಮಂಜೂರಾತಿ ಕೊಟ್ಟಿದ್ದೇವೆ, ಅದು ಯಾವ ಹಂತದಲ್ಲಿದೆ ಅದನ್ನು ಕೈಬಿಡುವುದು ಕಷ್ಟ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಾಕಿ ಯೋಜನೆಗಳು 100ಕ್ಕೆ 80, 85 ರಷ್ಟು ಕೆಲವು ಮುಗಿದು ಹೋಗಿದೆ. ಅದನ್ನು ನಿಲ್ಲಿಸತಕ್ಕದ್ದು ಕಷ್ಟ ಆಗಿದೆ. Each individual case will be examined and sanctioned so far as lift irrigation is concerned. I will send the full list.

ಶ್ರೀ ಟಿ.ಬಿ. ಜಯಚಂದ್ರ : ಒಟ್ಟಿನಲ್ಲಿ ನನ್ನ ಪ್ರಶ್ನೆಯ ಮೂಲ ಉದ್ದೇಶ ಮೂಲ ಉದ್ದೇಶ ನಿಮಗೆ ಅರ್ಥ ಆಗಿರಬೇಕು. ಈಗ ಬಾಳೆ-ಕುಂದರಿಯವರ ರಿಪೋರ್ಟಿನ ಪ್ರಕಾರ 73 ಟಿಎಂಎಫ್‌ಸಿ ವಾಟರ್ ಹೇಮಾವತಿಯಲ್ಲಿ ಅವೇಲಬಲ್ ಇರುವುದರಿಂದ ನನ್ನ ಮೂಲ ಪ್ರಶ್ನೆಯ ಉದ್ದೇಶ ಏನು ಅಂದರೆ ನಮ್ಮ ತುಮಕೂರು ಜಿಲ್ಲೆಗೆ ನೀರು ಬರುತ್ತದೆಯೋ ಇಲ್ಲವೋ ಎಂದು ಅನುಮಾನ ಬಂದಿರತಕ್ಕದ್ದು. ಈಗಾಗಲೇ ಸಿ.ಓಡಿ ಎನ್‌ಕ್ವೈರಿ ಮಾಡಿರತಕ್ಕದ್ದು, ಯೋಜನೆಯಲ್ಲಿ ಸುಮಾರು 110 ಕೋಟಿ ರೂಪಾಯಿ ಇಲ್ಲಿಯವರೆಗೆ ಇಟ್ಟು. ನನ್ನ ಒಂದು ಅನ್‌ಸ್ಟಾರ್ಡ್ ಪ್ರಶ್ನೆಗೆ ಉತ್ತರ ಕೊಟ್ಟಾಗ ಕೇವಲ 8 ಕೋಟಿ ರೂಪಾಯಿ ಖರ್ಚು ಮಾಡಿರುವಂತಹ ಸಂದರ್ಭದಲ್ಲಿ ಯಾವುದೇ ತರಹದ ಕೆಲಸಗಳು ಪ್ರಾರಂಭ ಆಗದೇ ಇರುವುದರಿಂದ ತುಮಕೂರು ಜಿಲ್ಲೆಗೆ ನೀರು ಬರುವುದಕ್ಕೆ ಸಾಧ್ಯವೇ ಇಲ್ಲವೇ ಎಂಬ ಪ್ರಶ್ನೆ ಬಂದಿದೆ. ಈಗಾಗಲೇ ಅನೇಕ ತರಹದ ಪ್ರತಿಕ್ರಿಯೆಗಳು ತುಮಕೂರು ಜಿಲ್ಲೆಯಿಂದ ಬಂದಿದೆ. ನಮ್ಮ ಉದ್ದೇಶ ಇದು ರಾಜಕೀಯ ಉದ್ದೇಶ ಅಲ್ಲ. ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಗಳು ಆದಂತಹ ಸಂದರ್ಭದಲ್ಲಿ ತುಮಕೂರು ಜಿಲ್ಲೆಗೆ ನೀರು ಬರುವುದಿಲ್ಲ. ಎಂದು ಇವತ್ತು ಸರ್ವೇಸಾಮಾನ್ಯವಾಗಿ ಕಾಣುವಂತಹ ಸಂದರ್ಭದಲ್ಲಿ ನಾನು ಈ ಮಾತನ್ನು ಹೇಳುತ್ತೇನೆ. ನಾವು ನಿಮಗೆ ದ್ವೇಷಿಗಳೇನೂ ಅಲ್ಲ ಅಥವಾ ಬೇಕಾಗಿಲ್ಲದವರೇನೂ ಅಲ್ಲ. ದಯಮಾಡಿ ಆ ಅನುಮಾನವನ್ನು ತಾವು ಕ್ಲಿಯರ್‌ಮಾಡಬೇಕು. ನಿಮಗೆ ಇರತಕ್ಕ 73 ಟಿಎಂಎಫ್‌ಸಿ ವಾಟರ್‌ನಲ್ಲಿ ತುಮಕೂರು ಜಿಲ್ಲೆಗೆ ಎಲ್ಲಿಯವರೆಗೆ ನೀರು ಕೊಡುತ್ತೀರಿ? ಅದು ನಿಮ್ಮ ಕಮಿಟ್‌ಮೆಂಟ್ ಪ್ರಕಾರ ನೀವು ಮುಗಿಸುವುದಕ್ಕೆ ಸಾಧ್ಯಾವೋ ಎಂದು ದಯಾಮಾಡಿ ಉತ್ತರ ಕೊಡಿ.

ಶ್ರೀ ಎಚ್.ಡಿ. ದೇವೇಗೌಡ : ರಾಜಕೀಯ ಮಾಡುವುದಕ್ಕೆ ಹೋಗಿದ್ದರೆ ಮಾಡುತ್ತಿದ್ದೆ. ನಾನು ರಾಜಕೀಯ ಮಾಡಲಿಲ್ಲ. ನೀವು ಹೇಳಿದ್ದು ತಪ್ಪೇನೂ ಅಲ್ಲ. ನಾನೇ ನೀರಾವರಿ ಮಂತ್ರಿಯಾಗಿ 595 ಕೋಟಿ ರೂಪಾಯಿಗೆ ರೀಕಾಸ್ಟ್ ಮಾಡಿದಾಗ ನಾನೇ ಸುಮಾರು 11-12 ಲಿಫ್ಟ ಇರಿಗೇಷನ್ ಅನ್ನು ಸೇರಿಸಿದ್ದೇನೆ. ಅದರ ಉದ್ದೇಶ ಬೇರೆ. ಅದನ್ನು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಈಗೇನು ಹೋರಾಟ ನಡೆಯುತ್ತಿದೆ, ಆ ಸನ್ನಿವೇಶದಲ್ಲಿ ಆಪ್ಟಿಮಮ್ ಯಾಸ್‌ಗೆ ಇರಬೇಕು ಎಂದು ಸೇರಿಸಿದ್ದೇವೆ. ಫೌಂಡೇಷನ್ ಸ್ಟೋನ್ ಹಾಕುವುದಕ್ಕೆ ನನಗೆ ಬರುತ್ತಿರಲಿಲ್ಲವೇ? ಕೆಲಸ ಶುರು ಮಾಡುವುದಕ್ಕೆ ಬರುತ್ತಾ ಇರಲಿಲ್ಲವೇ? ಅದು ಅಷ್ಟಕ್ಕೇ ನಿಲ್ಲಲಿಲ್ಲ .ಮುಂದೆ

ಹೋಯಿತು. ನಾನು ಅದರ ಬಗ್ಗೆ ಯಾರಿಗೂ ದೋಷ ಕೊಡಲಿಕ್ಕೆ ಹೋಗುವುದಿಲ್ಲ.ಮಾನ್ಯ ಮೊಯಿಲಿಯವರೂ ಇಲ್ಲಿಯೇ ಕುಳಿತಿದ್ದಾರೆ.ನಾನು ಹಿಂದೆ ಮುಂದೆ ಮಾತನಾಡುವುದು ಬೇಕಾಗಿಲ್ಲ. ಚರ್ಚೆ ಮಾಡಿದರೂ ಪ್ರಯೋಜನ ಇಲ್ಲ. ಮೊಯಿಲಿಯವರು ರಾಜಕೀಯ ಮಾಡಲಿಲ್ಲ. ಕೆಲವರು ಹೊರಗಡೆ ಇರುವವರು ಕೆಲವು ಮಹಾನುಭಾವರು ಎಲ್ಲಾ ಮಡುವುದು ಮಾಡಿಸಿದ್ದಾರೆ. ಅವರು ಮಾಡಿದ್ದು "ಬೆಣ್ಣೆ ಕೋತಿ ತಿಂದು ಮೇಕೆ ಬಾಯಿಗೆ ಒರೆಸಿದಂತೆ" ಎಂಬ ರೀತಿ ಮಾಡಿ ಈಗ ಎಲ್ಲಾ ಕಣ್ಣು ಮುಚ್ಚಿಕೊಂಡು ಕುಳಿತಿದ್ದಾರೆ. ನಾನು ಹೊರಗಡೆ ಐದು ವರ್ಷ ಇದ್ದಾಗ. ಈಗ ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆ. ಆದ್ದರಿಂದ ಸನ್ಮಾನ್ಯ ಸದಸ್ಯರಾದ ಮಾನ್ಯ ಟಿ.ಬಿ. ಜಯಚಂದ್ರ ಅವರಿಗೆ ಹೇಳುತ್ತೇನೆ. ನನ್ನ ಆಸೆ ಇರುವುದು ಫ್ಲೋ ಇರಿಗೇಷನ್ ಏನು ಇದೆ, ಅದಕ್ಕೆ ಕಾಸ್ಟ್ ಕಡಿಮೆ ಆಗುತ್ತದೆಯೇ ಫ್ಲೋ ಇರಿಗೇಷನ್‌ಗೆ ಮೆದಲನೆಯತ ಆದ್ಯತೆಯನ್ನು ಕೊಡುತ್ತೇವೆ. ತುಮಕೂರು, ಮಂಡ್ಯ, ಮೈಸೂರು, ಫ್ಲೋ ಇರಿಗೇಷನ್‌ಗ ಎಂಟೈರ್ ಕಾವೇರಿ ಬೇಸಿನ್‌ನಲ್ಲಿ ಮೊದಲನೆಯ ಆದ್ಯತೆಯನ್ನು ಕೋಡುತ್ತೇವೆ. ಇದು ಈ ಸರ್ಕಾರದ ನಿಲುವು. ಆದರೆ ಯಾವ ಲಿಫ್ಟ್ ಇರಿಗೇಷನ್ 80 ಪರ್ಸೆಂಟ್ ಕೆಲಸ ಆಗಿದೆ ಈಗ ಅದನ್ನು ನಿಲ್ಲಿಸಿ ಏನು ಮಾಡಲಿ? ಯಾವುದು ಆಗಿಲ್ಲ. ಅದನ್ನು ಸ್ವಲ್ಪ ಮಟ್ಟಿಗೆ ಸ್ಥಗಿತಗೊಳಿಸಬೇಕಾಗುತ್ತದೆ. ಅಂದರೆ ಅದನ್ನು ಕೈಬಿಡುವುದಿಲ್ಲ. ಆದರೆ ಯಾವುದು ಅಡ್ವಾನ್ಸ್ ಸ್ಟೇಜಿನಲ್ಲಿದೆ ಅದನ್ನು ನಿಲ್ಲಿಸುವುದು ಪ್ರಯೋಜನ ಅಲ್ಲ. ನಮಗೆ ಮಾರಲ್ ರೆಸ್ಪನ್ಸಿಬಿಲಿಟಿ ಇದೆ. ಬಾಗೂರು ಮತ್ತು ನವಿಲೆ ಹತ್ತಿರ ಜನ ಸಾಯುತ್ತಿದ್ದಾರೆ. ಅರಕಲಗೂಡು ಹತ್ತಿರ ಜನ ಸಾಯುತ್ತಿದ್ದಾರೆ. First prefernece will be given to flow irrigation in the entire Cauvery basin, Which includes Mysore, Tumkur and Mandya. ಇಷ್ಟು ಮಾತ್ರ ಪ್ರಾಮಾಣಿಕವಾಗಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಬಾಗೂರು ಮತ್ತು ನವಿಲೆ ಫ್ಲೋ ಇರಿಗೇಷನ್‌ಬಗ್ಗೆ ಹೇಳಿದ್ದೀರಿ.

SRI H.D. DEVE GOWDA : Flow irrigation will not be stopped either in Mandya, Mysore or Tumkur.

ಶ್ರೀ ಎಸ್.ಸಿ. ಮುದ್ದಹನುಮೇಗೌಡ : ಹೇಮಾವತಿ ವಿಚಾರ ಬಂದಾಗ ದಯಮಾಡಿ ನಮಗೆ ಅವಕಾಶ ಕೊಡಿ.

ಅಧ್ಯಕ್ಷರು : ಇದು ಪ್ರಶ್ನೋತ್ತರ ಬೇರೆಯವರಿಗೆ ಅವಕಾಶವಿಲ್ಲ.

ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದ ಸಹಾಯ ಮತ್ತು ಅನುದಾನ

668 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾಕರದಿಂದ ರಾಜ್ಯ ಸರ್ಕಾರಕ್ಕೆ ಯಾವ ಯಾವ ರೀತಿಯಲ್ಲಿ ಆರ್ಥಿಕ ಸೌಲಭ್ಯ ದೊರೆಯುತ್ತದೆ?

ಆ) ಕೇಂದ್ರ ಸರ್ಕಾರ ಯಾವ, ಯಾವ ಯೋಜನಾ ಕಾರ್ಯಕ್ರಮಗಳಿಗೆ ಎಷ್ಟೆಷ್ಟು ಕೋಟಿ ರೂಗಳನ್ನು ಅನುದಾನ ರೂಪದಲ್ಲಿ ನೀಡಿದೆ. ರಾಜ್ಯ ಸರ್ಕಾರದವರು ಉದ್ದೇಶಿತ ಯೋಜನೆಗಳಿಗೆ ಮತ್ತು ಕಾರ್ಯಕ್ರಮಗಳಿಗೆ ಸರಿಯಾಗಿ ಈ ಹಣವನ್ನು ಉಪಯೋಗಿಸುತ್ತಿದ್ದಾರೆಯೇ?

ಶ್ರೀ ಸಿದ್ದರಾಮಯ್ಯ (ಹಣಕಾಸು ಮಂತ್ರಿಗಳು) :